ಆ) ಹಾಗಿದ್ದಲ್ಲಿ ಆದಾಯದಲ್ಲಿ ಕಡಿಮೆ ಆಗಿರುವುದಕ್ಕೆ ಕಾರಣಗಳೇನು? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಎ) ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕ ವಸೂಲಾತಿಯಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 1995-96 ರಿಂದ 1997-98ರ ವರೆಗಿನ ಆದಾಯ ಈ ಕೆಳಗಿನಂತಿದೆ.

ವರ್ಷ	ಮಾರುಕಟ್ಟೆ ಶುಲ್ಕ	ಲೈಸೆನ್ಸ್ ಶುಲ್ಕ	ಇತರೆ	ಒಟ್ಟು ಆದಾಯ
95-96	5,62,677	59,205	90,117	7,11,999
96-97	5,39,374	43,841	2,01,045	7,84,260
97-98	4,81,636	46,555	3,30,396	8,58,587

ಆ) ಈ ಮಾರುಕಟ್ಟೆ ಕ್ಷೇತ್ರದ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಆಕ್ಕಪಕ್ಕದ ಮಾರುಕಟ್ಟೆಗಳಿಗೆ ಕೊಂಡೊಯ್ಯುವುದರಿಂದ ಮತ್ತು ಹಿಂದಿನ ವರ್ಷದಲ್ಲಿ ಕಡಿಮೆ ಮಳೆಯಾದ ಪ್ರಯುಕ್ತ ಈ ಮಾರುಕಟ್ಟೆಗೆ ಹುಟ್ಟುವಳಿಗಳ ಅವಕದಲ್ಲಿ ಕಡಿಮೆಯಾಗಿರುವುದು ಕಂಡು ಬಂದಿದ್ದು, ಈ ವ್ಯಾಪಾರ ವಹಿವಾಟು ಕಡಿಮೆ ಇದ್ದ ಪ್ರಯುಕ್ತ ಶುಲ್ಕ ವಸೂಲಾತಿಯಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಉಂಟಾಗಿರುವುದು ಕಂಡು ಬಂದಿದೆ. ಶುಲ್ಕ ವಸೂಲಾತಿಯಲ್ಲಿ ಆದಾಯವನ್ನು ಹೆಚ್ಚಿಸಿ ಸಮಿತಿಗೆ ನಿಗದಿಪಡಿಸಿರುವ ಗುರಿ ಸಾಧಿಸಲು ಮಾರುಕಟ್ಟೆ ಸಮಿತಿಗೆ ನೋಟೀಸುಗಳನ್ನು ನೀಡಲಾಗಿದೆ.

ಇ) ಆದಾಯ ಕಡಿಮೆಯಾಗಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿಯನ್ನು ಕೇಳಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಮಳೆಯಿಂದ ಆಗಿರುವ ನಷ್ಟ.

2746: (3796)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ಮೂರು ತಿಂಗಳಲ್ಲಿ ಆದ ಮಳೆಯಿಂದ ಎಷ್ಟು ಮನೆಗಳು ಬಿದ್ದಿವೆ, ಇದರಿಂದಾಗಿ ಬೆಳೆನಾಶ, ಜೀವನಾಶ ಹಾನಿ ಎಷ್ಟು (ಪ್ರತಿ ಗ್ರಾಮಾವಾರು ಮಾಹಿತಿಯನ್ನು ಒದಗಿಸುವುದು)

ಆ) ಸರ್ಕಾರದಿಂದ ಪರಿಹಾರ ರೂಪದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ (ಬಿಡುಗಡೆ ಮಾಡಿದ ಹಣವೆಷ್ಟು) ಖರ್ಚಿನ ವಿವರ (ಪ್ರತಿ ತಾಲ್ಲೂಕಿನ ವಿವರ ನೀಡುವುದು)

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಬಿದ್ದಿರುವ ಮನೆಗಳ ಸಂಖ್ಯೆ - 13065

ಬೆಳೆ ಹಾನಿ - ರೂ. 1070.92 ಲಕ್ಷಗಳು

ಜೀವಹಾನಿ - 8

ಆ) ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಹಾವೇರಿ ಜಿಲ್ಲೆಗೆ ರೂ. 110.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ವೆಚ್ಚದ ವಿವರ ಹೀಗಿದೆ -

		(ರೂ.ಲಕ್ಷಗಳಲ್ಲಿ)
1.	ಬಾಗಲಕೋಟೆ	5.82
2.	ಬಾದಾಮಿ	3.92
3.	ಹುನಗುಂದ	3.73
4.	ಜಮಖಂಡಿ	4.45
5.	ಮುದ್ದೋಳ	2.85
6.	ಬೀಳಗಿ	3.02
	ಒಟ್ಟು	23.79